ಪಿಡಬ್ಲು-1

**ಸಾಕ್ಷಿಯನ್ನು ದಿನಾಂಕ 20-01-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಎ. ಆರ್. ನಾಯ್ಕ ವಕೀಲರಿಂದಃ,**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಅಪಘಾತಕ್ಕೆ ಸಂಬಂಧಿಸಿದಂತೆ ಪ್ರಥಮ ವರ್ತಮಾನ ವರದಿ ನಿಪಿ-1 ಎಂದು, ದೂರು ನಿಪಿ-2 ಎಂದು, ಸ್ಥಳ ಪಂಚನಾಮೆ ನಿಪಿ-3 ಎಂದು, ದೋಷಾರೋಪಣ ಪಟ್ಟಿ ನಿಪಿ-4 ಎಂದು, ಪಿಎಂ ರಿಪೋರ್ಟನ್ನು ನಿಪಿ-5 ಎಂದು, ರೇಶನ್ ಕಾರ್ಡ ನಿಪಿ-6 ಎಂದು, ನನ್ನ ಮಗಳ ದೃಢೀಕರಣ ಅಂಕಪಟ್ಟಿ ನಿಪಿ-7 ಎಂದು, 3 ದೃಢೀಕೃತ ಆಧಾರ ಕಾರ್ಡ ನಿಪಿ-8 ರಿಂದ 10 ಎಂದು ಗುರುತಿಸಲಾಯಿತು. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

**ಪಾಟೀಸವಾಲುಃ 1 ಮತ್ತು 3 ನೇ ಎದುರುದಾರರು ಗೈರು ಹಾಜರು. ಆದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀಸವಾಲುಃ 2 ನೇ ಎದುರುದಾರರ ಪರ ವಕೀಲರಾದ ಶ್ರೀ ಎಂ. ಎಲ್. ನಾಯ್ಕರಿಂದಃ**

ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ನನ್ನ ಮೃತ ಮಗಳು ದ್ವಿತೀಯ ಪಿಯುಸಿ ಓದಿದ್ದಳು. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಬೈಕ್ ಸವಾರ ಸುರೇಶ ಗಣಪು ಗೌಡ ನಮಗೆ ದೂರದ ಸಂಬಂಧಿಕ. ಬೈಕ್ ಸವಾರನ ತಪ್ಪಿನಿಂದಲೇ ಅಪಘಾತ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡೂ ವಾಹನಗಳ ತಪ್ಪಿನಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ಮಗಳು ರೂ.20,000-00 ಸಂಪಾದನೆ ಮಾಡುತ್ತಿದ್ದಳು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಮಗಳಿಗೆ 20 ಸಾವಿರ ರೂಪಾಯಿ ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂತ್ಯ ಸಂಸ್ಕಾರಕ್ಕೆ ಒಂದು ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕೋಸ್ಕರ ನನ್ನ ಮಗಳ ವಯಸ್ಸನ್ನು ಕಡಿಮೆ ತೋರಿಸಿ ಆದಾಯವನ್ನು ಹೆಚ್ಚು ತೋರಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 4 ನೇ ಎದುರುದಾರರ ಪರ ವಕೀಲರಾದ ಶ್ರೀ ಎಸ್. ಎಂ. ಭಾಗ್ವತರಿಂದಃ**

ಪೋಲೀಸರು ತನಿಖೆ ಮಾಡಿ 1 ನೇ ಎದುರುದಾರರ ಬೈಕ್ ಸವಾರನ ಮೇಲೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಕಾರು ಚಾಲಕನಿಗೆ ಸೂಕ್ತ ಡಿ.ಎಲ್. ಇರಲಿಲ್ಲ ಎಂದರೆ ಸರಿಯಲ್ಲ. 3 ನೇ ಎದುರುದಾರರು ವಿಮಾ ಶರತ್ತನ್ನು ಉಲ್ಲಂಘಿಸಿರುವುದರಿಂದ 4 ನೇ ಎದುರುದಾರರು ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಉಳಿದಂತೆ ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ.**

**ಪಿಡಬ್ಲ್ಯು-1**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

Sd/-

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**